# 1. ರಾಷ್ಟ್ರೀಯ ಹಬ್ಬಗಳ ಮಹತ್ವ:-

ಪೀಠಿಕೆ:- ಇಡೀ ರಾಷ್ಟ್ರವೇ ಒಟ್ಟಾಗಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ದೇಶದ ಐಕ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಹಬ್ಬಗಳು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಭಾರತದಂತಹ ವೈವಿಧ್ಯತೆಯುಳ್ಳ ರಾಷ್ಟ್ರಗಳಲ್ಲಿ ಏಕತೆಯನ್ನು ತರುವುದು ಇಂತಹ ರಾಷ್ಟ್ರೀಯ ಹಬ್ಬಗಳ ಮೂಲಕ ಸಾಧ್ಯವಿದೆ.

ವಿಷಯ ವಿವರಣೆ:- " ಇಡೀ ರಾಷ್ಟ್ರದ ಜನರೆಲ್ಲರೂ ಯಾವುದೇ ಬೇಧಭಾವವಿಲ್ಲದೇ ಜಾತಿ, ಧರ್ಮ, ಪ್ರಾದೇಶಿಕ ಭಿನ್ನತೆಯನ್ನು ತೊರೆದು ಒಟ್ಟಾಗಿ ಆಚರಿಸುವ ಹಬ್ಬಗಳೇ 'ರಾಷ್ಟ್ರೀಯ ಹಬ್ಬಗಳು' ಎಂದು ಕರೆಯಬಹುದು. ನಮ್ಮ ದೇಶದಲ್ಲಿ ಮೂರು ರಾಷ್ಟ್ರೀಯ ಹಬ್ಬಗಳೆಂದು ಘೋಷಿಸಲಾಗಿದೆ. ಅವುಗಳೆಂದರೆ-

1. ಸ್ವಾತಂತ್ರ್ಯ ದಿನಾಚರಣೆ

2. ಗಣರಾಜ್ಯೋತ್ಸವ

3. ಗಾಂಧಿ ಜಯಂತಿ.

4 ಶಿಕ್ಷಕರ ದಿನಾಚರಣೆ

5. ಮಕ್ಕಳ ದಿನಾಚರಣೆ

ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯೂ ರಾಷ್ಟ್ರಗೀತೆ, ರಾಷ್ಟ್ರಧ್ವಜ, ರಾಷ್ಟ್ರಲಾಂಛನಗಳ ಬಗ್ಗೆ ತಿಳಿದು ಸ್ವಯಂ-ಪ್ರೇರಿತರಾಗಿ ಗೌರವವನ್ನು ಸಲ್ಲಿಸುತ್ತಾರೆ. ಇವುಗಳನ್ನು ಕಾಲಕಾಲಕ್ಕೆ ತಮ್ಮದೇ ಆದ ಸಾಂಸ್ಕೃತಿಕ ವೈಭವಗಳೊಂದಿಗೆ ಆಚರಿಸುವರು.

ರಾಷ್ಟ್ರೀಯ ಹಬ್ಬಗಳ ಈ ಸಂದರ್ಭದಲ್ಲಿ ಭಾರತೀಯರಾದ ನಾವು ನಮ್ಮಲ್ಲಿನ ಭಿನ್ನಾಭಿಪ್ರಾಯಗಳು, ಜಾತಿ, ಮತ. ಪಂಥ, ಲಿಂಗ, ವಯಸ್ಸು, ವರ್ಗ/ವರ್ಣಗಳ ಬೇಧ-ಭಾವವಿಲ್ಲದೇ ಐಕ್ಯಭಾವದಿಂದ, ಶ್ರದ್ಧಾಭಕ್ತಿಯಿಂದ ಆಚರಿಸುತ್ತೇವೆ.

1. ಸ್ವಾತಂತ್ರ್ಯ ದಿನಾಚರಣೆ:- 1947ರ ಆಗಸ್ಟ್ 14ರ ಮಧ್ಯರಾತ್ರಿ 12:00ಗಂಟೆಗೆ ಬ್ರಿಟೀಷರು ನಮಗೆ ರಾಜಕೀಯ ಸ್ವಾತಂತ್ರ್ಯ ನೀಡಿದುದರ ಉದ್ದೇಶಕ್ಕಾಗಿ ಅಂದಿನಿಂದ ಇಂದಿನರೆಗೂ ಮತ್ತೆ ಮುಂದೆಯೂ ಆಗಸ್ಟ್ 15ರಂದು ಸ್ವತಂತ್ರ್ಯ ದಿನಾಚರಣೆಯನ್ನು ಆಚರಿಸುತ್ತೇವೆ.

ಗಾಂಧೀಜಿಯವರ ನಾಯಕತ್ವದಲ್ಲಿ ನೇತಾಜಿ, ಭಗತ್ ಸಿಂಗ್, ಸಾವರ್ಕರ್ ಮುಂತಾದ್ವ ಸೇರಿದಂತೆ ಲಕ್ಷಾಂತರ ಹೋರಾಟಗಾರರ ತ್ಯಾಗ-ಬಲಿದಾನ ಮಾಡಿದ ಮಹನೀಯರನ್ನು ನೆನೆಯುವ ಸುಸಂಧಿ.

**2. ಗಣರಾಜ್ಯೋತ್ಸವ:-** ಸ್ವಾತಂತ್ರ್ಯಾ ನಂತರ ಭಾರತೀಯರಾದ ನಾವು ಸಂವಿಧಾನದ ಅಡಿಯಲ್ಲಿ ಪ್ರಜಾಪ್ರಭುತ್ವದ ಪ್ರತಿನಿಧಿಗಳಾದ ದಿನವೇ ಜನೇವರಿ 26, 1950. ಅಂದು ಸಂವಿಧಾನವನ್ನು ನಾವು ಅಳವಡಿಸಿಕೊಂಡ ಸುದಿನ. ಸಂವಿಧಾನದ ಮಹತ್ವ ಮತ್ತು ಶ್ರೀ. ಅಂಬೇಡ್ಕರ್ ಸೇರಿದಂತೆ ಅನೇಕ ಸಂವಿಧಾನದ ನಿರ್ಮಾತೃಗಳನ್ನ ನೆನೆಯುವ ಅಮೃತ ಗಳಿಗೆಯಾಗಿದೆ.

**3. ಗಾಂಧಿ ಜಯಂತಿ:-** ಯಾವುದೇ ಒಂದು ದೇಶದ ಜನರೆಲ್ಲರೂ ಒಟ್ಟಾಗಿ ಸೇರಲು ನಾಯಕತ್ವ ಬೇಕು.ಸ್ವಾತಂತ್ರ್ಯದ ನಾಯಕತ್ವ ವಹಿಸಿದವರು ಮಹಾತ್ಮ ಗಾಂಧೀಜಿ. ಅವರು ಹುಟ್ಟಿ ದಿನವೇ ಅಕ್ಟೋಬರ್ 02, ಆ ದಿನವನ್ನು ಗಾಂಧಿ ಜಯಂತಿಯೆಂದು ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಚಲಾಗುತ್ತದೆ. ಇವರ ನಾಯಕತ್ವದಲ್ಲಿ ನಮಗೆ ಸ್ವಾತಂತ್ರ್ಯ ದೊರಕಿದ್ದು, ಅವರ ಆದರ್ಶಗಳನ್ನು ನೆನೆಯುತ್ತ, ಅವರನ್ನು ಸ್ಮರಿಸುತ್ತಾ ಸ್ವಾತಂತ್ರ್ಯದ ಮಹತ್ವದ ಬಗ್ಗೆ ಕೊಡಾಡುವ ದಿನವಾಗಿದೆ.

ಉಪಸಂಹಾರ:- ಭಾರತದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರಿಂದ ಪ್ರತಿಯೊಬ್ಬ ನಾಗರೀಕರಲ್ಲಿ ಏಕತೆ, ದೇಶಭಕ್ತಿ, ಸಂವಿಧಾನದ ಮಹತ್ವ, ನಾಯಕತ್ವದ ಮಹತ್ವ ಮುಂತಾದ ವಿಚಾರಗಳನ್ನು ತಿಳಿಯಲು ಮತ್ತು ನಾವು ಅದೇ ರೀತಿ ನಡೆದುಕೊಳ್ಳಲು ನೆರವಾಗುತ್ತದೆ ಎಂಬ ಆಶಯವನ್ನು ಇಟ್ಟುಕೊಳ್ಳೋಣ.

**********************************

## 2. ಗ್ರಂಥಾಲಯಗಳ ಮಹತ್ವ:-

**ಪೀಠಿಕೆ:-** ಗ್ರಂಥಗಳ ಆಲಯವೇ ಗ್ರಂಥಾಲಯ. ಈ ಗ್ರಂಥಾಲಯಗಳು ಎಂಬುದೊಂದು ಮಾನವನ ಸಾಮಾಜಿಕ ಜೀವನದ ಪ್ರಮುಖ ಭಾಗಗಳಾಗಿವೆ. ಗ್ರಂಥಾಲಯಗಳ ಗ್ರಂಥಗಳು ಮನುಷ್ಯನ ಜ್ಞಾನವನ್ನು ಹೆಚ್ಚಿಸುವ ಹಾಗೂ ಅಮೂಲ್ಯ ಸಮಯವನ್ನು ಸದುಪಯೋಗ ಮಾಡಿಕೊಳ್ಳುವ ಸಾಧನಗಳಾಗಿವೆ.

**ವಿಷಯ ವಿವರಣೆ:-** ಅಪಾರ ಜ್ಞಾನ ಸಂಪತ್ತನ್ನು ಹೊಂದಿರುವ ಗ್ರಂಥಗಳ ಆಲಯ(ಮನೆ)ಯೇ ಗ್ರಂಥಾಲಯ ಎಂದರ್ಥ. ಇಲ್ಲಿ ಎಲ್ಲಾ ಬಗೆಯ, ಸಮಸ್ತ ವಿಷಯಗಳ ಸಾವಿರಾರು ಪುಸ್ತಕಗಳು ದೊರೆಯುತ್ತವೆ.

**ಗ್ರಂಥಾಲಯಗಳ ಮಹತ್ವ:-**

1) ಪುಟ್ಟ-ಪುಟ್ಟ ಮಕ್ಕಳ ಜ್ಞಾನಹಾಗೂ ಮನಸ್ಸು ವಿಕಾಸವಾಗಲು. ಹಿರಿಯರಿಗೆ ಸಮಯದ ಸದುಪಯೋಗವಾಗಲು ಸಹಕಾರಿ.
2) ಯುವಕರಿಗೆ, ಸ್ಪರ್ಧಾರ್ಥಿಗಳಿಗೆ-ಜ್ಞಾನಸುಧೆ ನೀಡುವ ಜ್ಞಾನಕಾಶಿಯಾಗಿದೆ. ಇದರಿಂದ ಹಲವಾರು ಜನರು ವಿವಿಧ ವಿಷಯ & ಕ್ಷೇತ್ರಗಳಲ್ಲಿ ಔನ್ನತ್ಯ ಹೊಂದಿ ಯಶಸ್ವಿಯಾಗಿದ್ದಾರೆ. & ಯಶಸ್ವಿಯಾಗುತ್ತಿದ್ದಾರೆ.
3) ಪುಸ್ತಕಗಳನ್ನು ಕೊಂಡು ಓದಲಾರದವರಿಗೆ, ದಿನನಿತ್ಯ ವಿದ್ಯಮಾನಗಳನ್ನು ತಿಳಿದುಕೊಳ್ಳಬೇಕೆಂದವರಿಗೆ ಜ್ಞಾನದೇಗುಲವಾಗಿದೆ.
4) ಹಲವಾರು ವ್ಯಕ್ತಿಗಳ ವ್ಯಕ್ತಿತ್ವ & ಭವಿಷ್ಯವನ್ನು ಬದಲಿಸುವ ದಿವ್ಯತಾಣವಾಗಿದೆ.
5) ಸಾಹಿತ್ಯ ವಲಯಕ್ಕೆ ಸೇರಿದವರಿಗೆ ಬೇಕಾದ ಎಲ್ಲಾ ಸಾಹಿತ್ಯ ಪ್ರಕಾರಗಳು ದೊರೆಯುವುದರಿಂದ ಸಹೃದಯಿಗಳಿಗೆ ಅಮೃತ ತಾಣವಾಗಿದೆ.
6) ಇಂದಿನ ಮಾಹಿತಿ-ತಂತ್ರಜ್ಞಾನ ಯುಗದಲ್ಲೂ ಗ್ರಂಥಾಲಯದ ಕಡಿಮೆಯಾಗಿಲ್ಲ ಮತ್ತು ಮುಂದೆಯೂ ಕಡಿಮೆಯಾಗದು.

-ಹೀಗೆ ಬರೆಯುತ್ತಾ ಸಾಗಿದರೆ ಗ್ರಂಥಾಲಯದ ಮಹತ್ವ ಕಡಿಮೆಯೆನಿಸದು.

ಗ್ರಂಥಗಳು & ಗ್ರಂಥಾಲಯದ ಮಹತ್ವ ಅರಿತು ನಮ್ಮ ಭವಿಷ್ಯವನ್ನು ಹಸನು ಮಾಡಿಕೊಳ್ಳಬೇಕು. ಗ್ರಂಥಾಲಯದಲ್ಲಿ ಪ್ರತಿದಿನ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. "ಒಂದು ದೇವಸ್ಥಾನ ಕಟ್ಟಿಸಿದರೆ ನೂರಾರು ಭಿಕ್ಷುಕರು ಹುಟ್ಟುತ್ತಾರೆ. ಒಂದು ಗ್ರಂಥಾಲಯ ಕಟ್ಟಿದರೆ ನೂರಾರು ವಿದ್ವಾಂಸರು ಹುಟ್ಟುತ್ತಾ[ರೆ]" ಎಂದು ಡಾ. ಶ್ರೀ. ಬಾಬಾಸಾಹೇಬ್ ಅಂಬೇಡ್ಕರ್‌ರವರು ಗ್ರಂಥಾಲಯದ ಮಹತ್ವವನ್ನು ಸುಂದರವಾಗಿ ಹೇಳಿದ್ದಾರೆ.

ಗ್ರಂಥಾಲಯಗಳಿಲ್ಲದ ಶಾಲೆ-ಕಾಲೇಜುಗಳಿಲ್ಲ.ವಿಶ್ವ ವಿದ್ಯಾಲಯಗಳಂತೂ ಮೊದ[ಲೇ] ಇಲ್ಲ. ಗ್ರಂಥಾಲಯದಲ್ಲಿ ಒಬ್ಬ ಗ್ರಂಥಪಾಲಕರಿರುತ್ತಾರೆ. ಅವರನ್ನು 'ಶಿಕ್ಷಕರ ಶಿಕ್ಷಕ[ರು]' ಎಂದು ಕರೆಯುತ್ತಾರೆ. ಶಿಕ್ಷಕ ಪಾಠವನ್ನು ಬೋಧಿಸಿದರೆ, ಗ್ರಂಥಪಾಲಕ(ಕನ್ನಡ ಶಿಕ್ಷಕರೇ ಹೆಚ್ಚು) ಶಿಕ್ಷಕರಿಗೆ ಅವಶ್ಯಕ ಮತ್ತು ಸಂದರ್ಭೋಚಿತ ಪುಸ್ತಕಗಳನ್ನು ಒದಗಿಸುವುದರ ಮೂಲಕ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ನೆರವಾಗುತ್ತಾನೆ. **'ಉತ್ತಮ ಗ್ರಂಥಗಳು ಮುಂದಿನ ಜನಾಂಗದ ಆಸ್ತಿ'** ಎಂದು ಅನಾಮಿಕನ ನುಡಿ.

**ಉಪಸಂಹಾರ:-** ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಪುಟಗಳನ್ನು ಕತ್ತರಿಸಿಕೊಳ್ಳಬಾರದು ಮತ್ತು ಕದಿಯಬಾರದು. ಕದಿಯುವುದಾದರೆ ಜ್ಞಾನವನ್ನು ಕದಿಯಬೇಕು. ಸ್ಪರ್ಧಾತ್ಮಕ ಪ್ರಪಂಚದಲ್ಲಿ ಜ್ಞಾನದ ಬಲದಿಂದ ಮುನ್ನುಗ್ಗಲು ಗ್ರಂಥಾಲಯಗಳು ಸಹಕಾರಿ.

*****************************

## 4. ಸ್ವಚ್ಛಭಾರತ ಅಭಿಯಾನ

ಪೀಠಿಕೆ/ಪ್ರಸ್ತಾವನೆ:- ಪರಿಸರವನ್ನು ಸ್ವಚ್ಛವಾಗಿರಿಸಿ ಕೊಳ್ಳಲು ಜನರನ್ನು ಪ್ರೇರೇಪಿಸುವ ಅಭಿಯಾನವೇ ಸ್ವಚ್ಛಭಾರತ ಅಭಿಯಾನವಾಗಿದೆ. ಭಾರತದ ಹಳ್ಳಿ, ನಗರಗಳಲ್ಲಿ ಸ್ವಚ್ಛತೆಯ ವಿಚಾರದಲ್ಲಿ ಕಾಳಜಿಯಿಲ್ಲದಿರುವುದನ್ನು ಗಮನಿಸಿ ಜಾರಿಗೊಳಿಸಿದ ಜನಜಾಗೃತಿ ಕಾರ್ಯಕ್ರಮವಾಗಿದೆ.

ವಿಷಯ ವಿವರಣೆ: 'ಆರೋಗ್ಯವೇ ಭಾಗ್ಯ' ಎಂಬುದು ಪ್ರಸಿದ್ಧ ಹೇಳಿಕೆ. ಆರೋಗ್ಯವಾಗಿ ರಲು ಅದನ್ನು ಕಾಪಾಡಿಕೊಳ್ಳಲು ನಾವು ವಾಸ ಮಾಡುವ ಪರಿಸರ ಶುದ್ಧವಾಗಿರಬೇಕು. 'ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ, ಮನೆಯೊಳಗೆ ಮನೆಯೊಡೆಯ ದ್ದಾನವೋ ಇಲ್ಲವೋ?' ಎನ್ನುವ ಸ್ಥಿತಿ ಎಲ್ಲೆಡೆ ಕಾಣಬರುತ್ತಿದೆ. ಬೀದಿ-ಬೀದಿಗಳಲ್ಲಿ, ಲ್ಲಿ-ಗಲ್ಲಿಗಳಲ್ಲಿ ಕಸದ ರಾಶಿ, ಕೊಳೆತ ವಾಸನೆ ತುಂಬಿರುವಂತೆ, ನಮ್ಮ ದೇಶದಲ್ಲಿರುವ ರೆ, ಸರೋವರ, ನದಿಗಳ ನೀರೂ ಶುದ್ಧವಾಗಿಲ್ಲ. ತೀರ್ಥಕ್ಷೇತ್ರಗಳೂ ಕೂಡ ಪವಿತ್ರವಾಗಿವೆ. ಈ ಸ್ಥಿತಿಯನ್ನು ಕೊನೆಗಾಣಿಸಲೆಂದು ಭಾರತದ ಪ್ರಧಾನಮಂತ್ರಿಗಳಾದ . ನರೇಂದ್ರ ದಾಮೋದರ್ ಮೋದಿಯವರು 'ಗಾಂಧೀಜಿಯವರ ಜನ್ಮದಿನದಂದು ಕ್ಟೋಬರ್-02) ರಂದು ಸ್ವಚ್ಛಭಾರತ ಅಭಿಯಾನವನ್ನು 2014ರಲ್ಲಿ ಪ್ರಾರಂಭಿಸಿದ್ದಾ

Scanned with CamS